# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ. ಸಿ. ನಂ.769/2015

ಸಿಡಬ್ಲ್ಯೂ-4 ಪಿಡಬ್ಲ್ಯೂ-2

ಹೆಸರುಃ ಶ್ರೀಮತಿ ಸರೋಜಾ

ಗಂಡನ ಹೆಸರುಃ ವಾಸುದೇವ ಕಾಚೂರ

ವಯಸ್ಸುಃ 43 ವರ್ಷ

ಉದ್ಯೋಗಃ ಖಾನಾವಳಿ ಕೆಲಸ

ವಾಸ ಸ್ಥಳಃ ತೆಲ್ಕೂರ ಗ್ರಾಮ

ದಿನಾಂಕ 06-03-2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾಸಾ-1 ನನ್ನ ಗಂಡ ಇರುತ್ತಾರೆ. ಅಭೀಲಾಶ ನನ್ನ ಮಗ ಇರುತ್ತಾನೆ. ಅವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಅಪಘಾತವು ಉಡಗಿ ರೋಡ ಆಕಾಶ ದಾಬಾ ಹತ್ತಿರ ಆಗಿತ್ತು. ನನ್ನ ಮಗ ಆಕಾಶ ದಾಬಾ ಮುಂದೆ ಕೂಡಿಸಿದ ಗಣೇಶನ ಮೂರ್ತಿಯನ್ನು ದರ್ಶನ ಮಾಡಲು ಹೋಗಿದ್ದು ಇತ್ತು. ಆಗ ವಾಸವದತ್ತಾ ಫ್ಯಾಕ್ಟರಿಯ ಕಡೆಯಿಂದ ಒಂದು ದ್ವಿಚಕ್ರ ವಾಹನ ರಸ್ತೆ ದಾಟುತ್ತಿದ್ದ ನನ್ನ ಮಗನಿಗೆ ಹಾಯಿಸಿ ಅಪಘಾತ ಮಾಡಿತ್ತು. ನಾನು ಅಪಘಾತ ಸ್ಥಳಕ್ಕೆ ಹೋಗಿ ನೋಡಿದ್ದು ನನ್ನ ಮಗನಿಗೆ ತಲೆಯ ಭಾಗಕ್ಕೆ ಪೆಟ್ಟಾಗಿತ್ತು, ಕಿವಿಯಿಂದ ರಕ್ತ ಬರುತ್ತಿತ್ತು. ಆಗ ನಾನು, ನನ್ನ ಸಂಬಂಧಿಕರಾದ ಶೋಭಾ, ಬಾಬು ಎಂಬುವವರು ಸ್ಥಳಕ್ಕೆ ಹೋಗಿ ನೋಡಿದ್ದು, ನನ್ನ ಮಗ ಮಾತನಾಡುತ್ತಿರಲಿಲ್ಲ. ಆಗ ಒಂದು ಆ್ಯಂಬುಲೆನ್ಸದಲ್ಲಿ ಹಾಕಿಕೊಂಡು ಸೇಡಂ ಸರಕಾರಿ ಆಸ್ಪತ್ರೆಗೆ ಉಪಚಾರಕ್ಕೆ ಸೇರಿಕೆ ಮಾಡಿರುತ್ತೇವೆ. ಆಗ ವೈದ್ಯಾಧಿಕಾರಿಗಳು ಹೆಚ್ಚಿನ ಚಿಕಿತ್ಸೆಗೆಗಾಗಿ ಕಲಬುರಗಿಗೆ ಆ್ಯಂಬುಲೆನ್ಸದಲ್ಲಿ ಕರೆದುಕೊಂಡು ಹೋಗುತ್ತಿರುವಾಗ ಮಳಖೇಡ ಹತ್ತಿರ ಬಂದಾಗ ನನ್ನ ಮಗ ತೀರಿಕೊಂಡಿರುತ್ತಾನೆ. ಸದರಿ ಅಪಘಾತದ ವಿಷಯವನ್ನು ನಾನು ಖಾನಾವಳಿ ನಡೆಸುತ್ತಿದ್ದು ಜನರು ಬಂದು ಹೇಳಿರುತ್ತಾರೆ. ದ್ವಿಚಕ್ರ ವಾಹನವನ್ನು ರಾಹುಲ ನಡೆಸುತ್ತಿದ್ದರು. ಆ ದ್ವಿಚಕ್ರ ವಾಹನದ ಮೇಲೆ ಮೂರು ಜನ ಕುಳಿತುಕೊಂಡು ಪಾಸ್ಟಾಗಿ ಬಂದು ಡಿಕ್ಕಿಪಡಿಸಿರುತ್ತಾರೆ. ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ. ಆರೋಪಿಯನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. (ಆರೋಪಿ ಈ ದಿವಸ ಗೈರು ಹಾಜರಿದ್ದು ಆರೋಪಿಯ ಗುರುತುಪರಿಚಯದ ಕುರಿತು ಅವರ ಪರ ವಕೀಲರು ಆಕ್ಷೇಪಣೆ ಇರುವುದಿಲ್ಲ ಎಂದು ವಾದ ಮಂಡಿಸಿರುತ್ತಾರೆ.) ಅಪಘಾತ ಯಾವ ದಿನಾಂಕದಂದು ಆಗಿರುತ್ತದೆ ಎಂದು ನೆನಪಿಲ್ಲ. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು**

ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಅಪಘಾತ ದಿನಾಂಕ 20.09.2015 ರಂದು ಆಗಿರುತ್ತದೆ ಎಂದರೆ ನೆನಪಿಲ್ಲ. ಅಪಘಾತಪಡಿಸಿದ ಮೋಟಾರ ಸೈಕಲ ನಂ.KA-34-V-4108 ಎಂದರೆ ನನಗೆ ನೆನಪಿಲ್ಲ.

**<u>ಪಾಟೀ ಸವಾಲುಃ ಶ್ರೀ ಎ. ಎಮ್. ಆರೋಪಿ ಪರ ವಕೀಲರಿಂದ</u>**

ಅಪಘಾತ ಆಗಿದೆ ಎನ್ನಲಾದ ಸ್ಥಳದಲ್ಲಿ ಸಾಕಷ್ಟು ವಾಹನಗಳ ಓಡಾಟ ಇರುತ್ತದೆ ಎಂದರೆ ಸರಿ. ಆಕಾಶ ದಾಬಾದ ಮುಂದುಗಡೆ ರಸ್ತೆಯ ಮೇಲೆ ರೋಡ ಹಂಸ ಇರುತ್ತವೆ ಎಂದರೆ ನಾನು ನೋಡಿಲ್ಲ. ಆಕಾಶ ದಾಬಾದ ಮುಂದುಗಡೆ ರೋಡಿನ ಆ ಬದಿಯಿಂದ ಈ ಬದಿಗೆ ಮತ್ತು ಈ ಬದಿಯಿಂದ ಆ ಬದಿಗೆ ಜನರು ಓಡಾಡುತ್ತಾರೆ ಎಂದರೆ ಸರಿ. ಆದ್ದರಿಂದ ಅಲ್ಲಿ ವಾಹನಗಳು ಸಾವಕಾಶವಾಗಿ ಬರುತ್ತವೆ ಎಂದರೆ ಸರಿ. ನನ್ನ ಮಗ ಅಪಘಾತದಲ್ಲಿ ತೀರಿಕೊಂಡ ಬಗ್ಗೆ ಸೇಡಂ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಅದನ್ನು ಮರಳಿ ಪಡೆದುಕೊಂಡಿರುತ್ತೇವೆ. ಅಪಘಾತವಾದಾಗ ನಾನು ಖಾನಾವಳಿಯಲ್ಲಿ ಇದ್ದೆ ಎಂದರೆ ಸರಿ. ಅಪಘಾತ ಆರೋಪಿಯ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಪಾಸ್ಟದಿಂದ ವಾಹನ ಚಲಾಯಿಸಿ ನನ್ನ ಮಗನಿಗೆ ಡಿಕ್ಕಿಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿ ವಾಹನ ಚಲಾಯಿಸುತ್ತಿದ್ದನು ಮತ್ತು ಅವನ ತಪ್ಪಿನಿಂದಲೇ ಅಪಘಾತವಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೂ ಆರೋಪಿಗೂ ಏನು ಸಂಬಂಧ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

**SYH*